

ಸಿಗಬಹುದಾದ ಎಲ್ಲ ಸಹಾಯವನ್ನೂ ಪಡೆಯಲು ತುದಿಗಾಲ ಮೇಲೆ ನಿಂತಿದ್ದ. ಇವನ ಮಗಳೇ 8ನೆಯ ತರಗತಿಯಲ್ಲಿ ಓದುತ್ತಿದ್ದ ಬಾಲೆ.

ಕಿರಿಯಜ್ಜನ ಎರಡನೆಯ ಮಗ ಬಿ.ಇ ಓದಿ ಊರಿನಲ್ಲಿಯೇ ಇದ್ದ ಯಾವುದೋ ಕಂಪನಿಯಲ್ಲಿ ಕೆಲಸದಲ್ಲಿದ್ದ. ತನ್ನ ತಮ್ಮನು ಅಮೆರಿಕದಿಂದ ಬಂದಾಗ ಏನಾದರೂ ಮಾಡಿ ಒಪ್ಪಿಸಿ ಅಮೆರಿಕದಲ್ಲಿ ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಲು ಯೋಜನೆ ಹಾಕಿದ್ದ. ಅನಂತರ ಅಲ್ಲೇ ಎಲ್ಲಾದರೂ ಕೆಲಸಕ್ಕೆ ಸೇರಿ ಜೀವನವಿಡೀ ಐಷಾರಾಮಿ ಜೀವನ ಸಾಗಿಸಬಹುದೆಂದು ಅವನ ಲೆಕ್ಕಾಚಾರವಾಗಿತ್ತು. ಈ ಸಲ ಏನಾದರೂ ವ್ಯವಸ್ಥೆ ಆಗಲೇಬೇಕೆಂದು ನಿರ್ಧರಿಸಿ ಕಚೇರಿಗೆ ಮುಂಗಡವಾಗಿಯೇ ರಜೆ ಅರ್ಜಿ ಸಲ್ಲಿಸಿದ್ದ. ಇದು ಜೀವನ್ಮರಣದ ಪ್ರಶ್ನೆಯಂತೆ ಅವನಿಗೆ ಕಾಣಿಸಿತ್ತು. ಲಕ್ಷಾಂತರ ರೂಪಾಯಿ ಸಂಬಳವಿದ್ದರೂ ಅದವನಿಗೆ